


# ಬಿಯರ್ ಬೈಕ್‌ನಲ್ಲಿ ಜಾಲಿ ರೈಡ್!

ನಾವು ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಯಾವುದಾದರೂ ಊರಿಗೆ ಹೋದಾಗ, ಸ್ವಂತ ಕಾರು ಟ್ಯಾಕ್ಸಿ ಅಥವಾ ಟೂರಿಸ್ಟ್ ಬಸ್ಸಿನಲ್ಲಿ ಹೋಗುತ್ತೇವೆ. ಕೆಲವರು ಬೈಕ್‌ಗಳಲ್ಲಿ ಊರೂರು ಸುತ್ತುತ್ತಾರೆ. ತಂಪಾದ ಬಿಯರ್ ಸೇವಿಸುತ್ತಾ, ಸುಶ್ರಾವ್ಯವಾದ ಸಂಗೀತವನ್ನು ಆಲಿಸುತ್ತಾ ನಮ್ಮ ವಾಹನವನ್ನು ನಾವೇ ಪೆಡಲ್ ಮಾಡಿಕೊಂಡು ಊರು ಸುತ್ತಾಡಿ ಐತಿಹಾಸಿಕ ಸ್ಥಳಗಳನ್ನು ನೋಡುವಂತಿದ್ದರೆ...? ಒಂದು ವೇಳೆ ನಿಮಗೇನಾದರೂ ಇಂತಹ ಆಸೆ ಇದ್ದರೆ, ನೀವೇನಾದರೂ ಯೂರೋಪ್ ಪ್ರವಾಸಕ್ಕೆ ಹೋಗುವಂತಿದ್ದರೆ ಜೆಕ್ ಗಣರಾಜ್ಯದ ರಾಜಧಾನಿ 'ಪ್ರಾಗ್' (ಪ್ರಾಹ) ನಗರಕ್ಕೆ ತಪ್ಪದೆ ಭೇಟಿ ನೀಡಿ, ನಿಮ್ಮ ಆಸೆ ನೆರವೇರುತ್ತದೆ.

ಪ್ರಾಗ್‌ನಲ್ಲಿ ಲಭ್ಯವಿರುವ 'ಬಿಯರ್ ಬೈಕ್'ನಲ್ಲಿ ನಗರದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದು. ವಾಹನ ಅತ್ತ ಬೈಕ್ ಆಕಾರದಲ್ಲಿಯೂ ಇಲ್ಲ ಇತ್ತ ಬಸ್ಸಿನಂತೆಯೂ ಇಲ್ಲ. ಅಸಲಿಗೆ ಇದು ಮೋಟಾರ್ ವಾಹನ ಅಲ್ಲವೇ ಅಲ್ಲ. ಪ್ರಯಾಣಿಕರೇ ಪೆಡಲ್ ಮಾಡಿಕೊಂಡು ಹೋಗಬಹುದಾದಂತಹ ವಿಶಿಷ್ಟ ವಾಹನ. ಈ ವಾಹನದಲ್ಲಿ ಕೇವಲ ಹತ್ತು ಮಂದಿ ಪೆಡಲ್ ಮಾಡಲು ಅವಕಾಶವಿದೆ. ಉಳಿದಂತೆ ಇತರೆ ಪ್ರಯಾಣಿಕರು ಕುಳಿತುಕೊಂಡು ಇಲ್ಲವೆ ಹಾಡುತ್ತಾ ಸಾಗಬಹುದು. ಸರತಿಯಂತೆ ಪೆಡಲ್ ಮಾಡಲೂಬಹುದು. ಪೆಡಲ್ ಮಾಡಿದಾಗ ವಾಹನ ಮುಂದೆ ಚಲಿಸುತ್ತದೆ, ವಾಹನವನ್ನು ಸ್ಟೇರಿಂಗ್ ಮೂಲಕ ಚಾಲಕ ನಿಯಂತ್ರಿಸುತ್ತಾನೆ. ಈ ವಾಹನದಲ್ಲಿ ಪ್ರಯಾಣಿಸುವವರ ಅನುಕೂಲಕ್ಕಾಗಿ ವಾಹನದ ಭಾರ ಕಡಿಮೆ ಇರುವಂತೆ ಹಗುರ ಲೋಹದಿಂದ ತಯಾರಿಸಿರುತ್ತಾರೆ.

ಬಿಯರ್ ಬೈಕ್‌ನಲ್ಲಿ ಕುಳಿತುಕೊಳ್ಳಲು ಆರಾಮದಾಯಕ ಕುರ್ಚಿಗಳಿರುತ್ತವೆ. ಬಿಯರ್ ಬೈಕ್‌ನಲ್ಲೇ ಬಾರ್ ಇದ್ದು ಬಗೆ ಬಗೆಯ ಬಿಯರ್‌ಗಳನ್ನು ಪರಿಚಾರಿಕೆಯರು ಬೇಡಿಕೆ ಮೇರೆಗೆ ನೀಡುತ್ತಾರೆ. ಬಿಯರ್ ಸೇವಿಸುತ್ತಾ, ಸುಶ್ರಾವ್ಯ ಸಂಗೀತವನ್ನು ಆನಂದಿಸುತ್ತಾ ಬೈಕ್ ತುಳಿಯುತ್ತಾ ಎರಡು ಗಂಟೆಗಳ ಅವಧಿಯಲ್ಲಿ 'ಪ್ರಾಗ್' ನಗರದ ಬಹುತೇಕ ಐತಿಹಾಸಿಕ ಸ್ಥಳಗಳನ್ನು ವೀಕ್ಷಿಸಬಹುದು.

ಇಂಗ್ಲಿಷ್ ಭಾಷೆ ತಿಳಿದಿರುವ ಡ್ರೈವರ್ ಹೆಚ್ಚು ಜನಸಂದಣಿಯಿರದ ರಸ್ತೆಗಳ ಮೂಲಕ ಬೈಕನ್ನು ಚಲಾಯಿಸುತ್ತಾ ಪ್ರೇಕ್ಷಣೀಯ ಸ್ಥಳಗಳ ಇತಿಹಾಸವನ್ನು ತಿಳಿಸುತ್ತಾರೆ. ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗಿ ಸಂಜೆ 8 ಗಂಟೆವರೆಗೂ ಪ್ರತಿ ಎರಡು ಗಂಟೆಗೊಮ್ಮೆ ನಿಗದಿತ ಪ್ರದೇಶದಿಂದ ಬೈಕ್‌ಗಳು ಹೊರಡುತ್ತವೆ. 13 ಮಂದಿ ಪ್ರಯಾಣಿಸಬಹುದಾದ ಬಿಯರ್ ಬೈಕ್ ಪ್ರಯಾಣಕ್ಕೆ 300ರಿಂದ 350 ಯೂರೋಗಳನ್ನು (ರೂ. 24,000–30,000) ತೆರಬೇಕಾಗುತ್ತದೆ. ಪ್ರಯಾಣದ ನಡುವೆ ಹದಿನೈದು ನಿಮಿಷಗಳಿಗೊಮ್ಮೆ ಪಾಲುಗಾರ ಬಾರ್‌ಗಳ ಬಳಿ ಟಾಯ್ಲೆಟ್ ಬ್ರೇಕ್ ಇರುತ್ತದೆ. ಪ್ರಯಾಣದ ಸಮಯದಲ್ಲಿ ನಿಗದಿತ ಪ್ರಮಾಣದ ಬಿಯರ್‌ನ್ನು ಕೊಡುತ್ತಾರೆ. ಅನಿಯಮಿತವಾಗಿ ಬಿಯರ್ ಸೇವಿಸುವ ಇಚ್ಛೆಯಿದ್ದಲ್ಲಿ, ಸ್ವಲ್ಪ ಹೆಚ್ಚಿಗೆ ಹಣ ಪಾವತಿಸಿದರೆ ಸಾಕು ಎಷ್ಟು ಬೇಕಾದರೂ ಕುಡಿಯಬಹುದು. ಬಿಯರ್ ಬೈಕ್ ಪ್ರಯಾಣ ಬಿಯರ್ ಪ್ರಿಯರಿಗೆ ವಿಶಿಷ್ಟ ಅನುಭವವನ್ನು ನೀಡುವುದರಲ್ಲಿ ಎರಡು ಮಾತಿಲ್ಲ.

■ ಜಿ. ನಾಗೇಂದ್ರ ಕಾವೂರು